

ಕೊಟ್ಟುವವಳೇ ಆಗಿ ಬದಲಾಗಬಹುದು. ದಿನವಿಡೀ ನಕ್ಕು ನಾಜೂಕನ್ನು ಪ್ರದರ್ಶಿಸುತ್ತಾ ಆಫೀಸಿನಲ್ಲಿ ಸೌಮ್ಯ ವಾತಾವರಣ ಮೂಡಿಸಿಡುವ ಇವಳು ಮನೆ ಸೇರಿದ ಮೇಲೆ ಮನೆಮಂದಿಯ ಮೇಲೆಲ್ಲಾ ಹರಿಹಾಯಲೂಬಹುದು, ಥೇಟು ರುಕ್ಮಿಣಿಯಂತೆ!

ಎದೆಯುಬ್ಬಿಸುವಂತಹ ಬಟ್ಟೆ ತೊಟ್ಟರೂ ಬೆನ್ನು ತೋಳುಗಳೆಲ್ಲಾ ಮುಚ್ಚಿರುವ ಅವಳ ಉಡುಗೆ ನೋಡಿದೊಡನೆ ನೆನಪಾಗುವ ರುಕ್ಮಿಣಿಯನ್ನು ನೆನೆಯುತ್ತಾ ಅಪರಾಧಿಯಂತೆ ರೆಸ್ಟ್ ರೂಮನ್ನು ಸೇರಿದವನೇ ಪಾಯಿಜಾಮದ ಕಾಲು ಸಂದಿಗೆ ಸಣ್ಣಗೆ ಕತ್ತರಿಯಿಟ್ಟು ಜಾಗಮಾಡಿಕೊಂಡು ಜಲಬಾಧೆ ನೀಗಿಸಿಕೊಂಡು ನಿರಾಳನಾಗತೊಡಗಿದ.

ಚೂಡಿದಾರವೇ ಇರಲಿ, ಚೆಂದದ ಸೀರೆಗೆ ಹೊಲಿಸುವ ಬ್ಲೌಸ್ ಇರಲಿ ಎಲ್ಲವೂ ಕುತ್ತಿಗೆ ಮತ್ತು ತೋಳು ಮುಚ್ಚುವ ಹಾಗೆಯೇ ಹೊಲಿಸಿದ ಬಟ್ಟೆ ತೊಟ್ಟು ಅದನ್ನೇ ತನ್ನ ವ್ಯಕ್ತಿತ್ವದ ಗುರುತಾಗಿಸಿಕೊಂಡಳು ರುಕ್ಮಿಣಿ. ತನ್ನಲ್ಲಿರುವ ಊನವನ್ನು ಧನಾತ್ಮಕವಾಗಿ ರೂಪಿಸಿಕೊಳ್ಳುವುದನ್ನು ಅವಳಿಂದ ಕಲಿಯಬೇಕು ಎಂದು ಯೋಚಿಸುತ್ತ ಹಗುರಾಗುತ್ತಿದ್ದ ವಿಕ್ರಂ. ರುಕ್ಮಿಣಿಯಲ್ಲಿರುವ ಊನ ಎಂದೇಕೆ ಹೇಳಬೇಕು, ಅವಳ ನೋವಿಗೆ ತಾನೇ ಕಾರಣ ಎಂದು ಗ್ರಹಿಸಿ ಮತ್ತೆ ಕುಬ್ಜನಾದ.

ರುಕ್ಮಿಣಿಯ ಚಂದಕ್ಕೆ ಮರುಳಾಗಿಯೇ ವಿಕ್ರಂ ಅವಳನ್ನು ಮದುವೆಯಾಗಿದ್ದು, ವಿಕ್ರಮನ ಪ್ರೀತಿಗೆ ಸೋತೇ ರುಕ್ಮಿಣಿ ಮದುವೆಗೊಪ್ಪಿದ್ದು. ಮೊದಮೊದಲು ಎಲ್ಲವೂ ಸರಿಯಾಗಿಯೇ ಇತ್ತು. ಕಾಳಜಿ, ಪ್ರೀತಿ, ಚಡಪಡಿಕೆ ವ್ಯಕ್ತಪಡಿಸುವಲ್ಲಿ ಒಬ್ಬರನ್ನೊಬ್ಬರು ಮೀರಿಸುವಂತಿದ್ದರು. ಕಷ್ಟ ಎಂದು ಶುರುವಾಗಿದ್ದೇ ಟೆಕ್ನೋಮಾರ್ಕ್ ಕಂಪನಿ ದಿವಾಳಿ ಎದ್ದು ಹೋಗುವ ಸಂದರ್ಭ ಬಂದಾಗ.

ಟೆಕ್ನೋ ಮಾರ್ಕ್ ಕಂಪನಿಯನ್ನು ಹುಟ್ಟು ಹಾಕಿದ್ದು ವಿಕ್ರಮನ ಗೆಳೆಯ ಅಭಿ. ಅಭಿಜಿತ್ ಪುರಾಣಿಕ್. ಆಸ್ಪತ್ರೆಗಳಿಗೆ ಬೇಕಾಗುವ ಎಂಆರ್ಐ ಮಷೀನು, ಸ್ಕ್ಯಾನಿಂಗ್, ಎಕ್ಸ್ರೇ ಮಷೀನುಗಳಿಗೆ ಬೇಕಾಗುವ ಬಿಡಿ ಭಾಗಗಳನ್ನು ತಯಾರಿಸಿ ದೊಡ್ಡ ದೊಡ್ಡ ಕಂಪನಿಗಳಿಗೆ ಪೂರವಟೆ ಮಾಡುವ ಕಂಪನಿ. ಅಭಿಜಿತನ ಕೈಗುಣ ಹೇಗಿತ್ತೆಂದರೆ ಟೆಕ್ನೋ ಮಾರ್ಕ್ ಕಂಪನಿ ಹುಟ್ಟಿದ ಎರಡು ವರ್ಷದಲ್ಲೇ ಒಳ್ಳೆಯ ಹೆಸರು ಮಾಡಿತ್ತು. ಅದರಂತೆ ಬೇಡಿಕೆ, ಆಯ–ವ್ಯಯ ಎಲ್ಲವೂ ಏರುತ್ತಲೇ ಹೋಯಿತು. ಫಂಡಿಂಗ್ ಮಾಡುವವರ, ಸಾಲ ಕೊಡುತ್ತೇನೆನ್ನುವವರ ಸಾಲೂ ಉದ್ದವಾಗುತ್ತಾ ಹೋಯಿತು. ಇನ್ನೇನು ಕಂಪನಿ ಷೇರು ಮಾರುಕಟ್ಟೆಯಲ್ಲಿ ಲೀಸ್ಟಿಂಗ್ ಆಗುತ್ತದೆ ಎನ್ನುವ ಸಮಯದಲ್ಲಿಯೇ ಅಭಿಜಿತ್ ಪುರಾಣಿಕ್ ಕಂಪನಿಯ ಹೆಸರಿನಲ್ಲಿ ಬ್ಯಾಂಕುಗಳಲ್ಲಿ ಕೋಟಿಗಟ್ಟಲೆ ಸಾಲ ಮಾಡಿ, ಫಂಡಿಂಗ್ ಮಾಡಿದವರ ದುಡ್ಡನ್ನೆಲ್ಲಾ ಲಪಟಾಯಿಸಿ, ತನ್ನ ಉದ್ಯೋಗಿಗಳಿಗೆ ಬೋನಸ್ ಸಾಯಲಿ, ನಾಲ್ಕು ತಿಂಗಳಿನ ಪಗಾರನ್ನೂ ಕೊಡದೆ, ಯಾರಿಗೂ ಹೇಳದೆ ಕಾಣೆಯಾಗಿಬಿಟ್ಟ. ಅಭಿಜಿತ್ ಪುರಾಣಿಕ್ ದೇಶಬಿಟ್ಟ, ಅಭಿಜಿತನನ್ನು ಅಪಹರಿಸಲಾಗಿದೆ, ಅಭಿಜಿತ್ ಆತ್ಮಹತ್ಯೆ ಮಾಡಿಕೊಂಡ ಎಂಬೆಲ್ಲಾ ಸುದ್ದಿ ದಿನಕ್ಕೊಮ್ಮೆ ಹುಟ್ಟಿ ಸಾಯುತ್ತಲೇ ಟೆಕ್ನೋ ಕಂಪನಿ ಗತಿಗೆಟ್ಟು ಹೋಯಿತು. ಕಂಪನಿಯನ್ನು ಟೇಕೋವರ್ ಮಾಡಲಿಕ್ಕಾಗಲಿ, ಮರ್ಜ್ ಮಾಡಿಕೊಳ್ಳುವುದಕ್ಕಾಗಲಿ ಯಾರೂ ಮುಂದೆ ಬರಲಿಲ್ಲ. ಕಂಪನಿ ಅಕ್ಷರಶಃ ಮುಳುಗುವುದರಲ್ಲಿತ್ತು. ಅಭಿಜಿತ್ ಎಲ್ಲಿಹೋದ, ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಏನು ಮಾಡಿದ, ಲಫಡಾ ಮಾಡಿದ್ದೆಲ್ಲಿ ಎಂದು ಇನ್ವೆಸ್ಟಿಗೇಶನ್ ಏನೋ ಶುರುವಾಯಿತು. ಆದರೆ ಕಂಪನಿ ಮುಳುಗುತ್ತಿದೆಯಲ್ಲ ಅದಕ್ಕೇನು ಪರಿಹಾರ?

ಆಗ ಟೆಕ್ನೋಮಾರ್ಕ್ ಕಂಪನಿಗೆ ಧೈರ್ಯವಾಗಿ ನಿಂತವನೇ ವಿಕ್ರಂ, ವಿಕ್ರಂ ಚಕ್ರವರ್ತಿ, ಟೆಕ್ನೋಮಾರ್ಕ್ ಕಂಪನಿಯ ಬರೀ ಹತ್ತು ಪರ್ಸಂಟ್ ಶೇರ್ ಹೋಲ್ಡರ್.

ಹತ್ತು ಪರ್ಸೆಂಟಿನಿಂದ ಅರವತ್ತು ಪರ್ಸೆಂಟ್ ತಲುಪುವ ದಾರಿ ಸುಲಭದ್ದಾಗಿರಲಿಲ್ಲ. ವಿಕ್ರಮನ ಬದಲು ಇನ್ಯಾರೇ ಅವನ ಜಾಗದಲ್ಲಿದ್ದರೂ ಸಾಧ್ಯವೂ ಆಗುತ್ತಿರಲಿಲ್ಲ.